# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

## ಸಿ.ಸಿ. ನಂಃ 92/2022

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೋಲಿಸ್ ಠಾಣೆ**

**// ವಿರುದ್ದ //**

**ಆರೋಪಿ ಃ ತಾಯಪ್ಪ.**

## ದೋಷಾರೋಪಣೆ

ನಾನುಃ ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಗಳಾದ

1. ತಾಯಪ್ಪ ತಂದೆ ಸಾಬಣ್ಣ ಕೋಟೇಪ್ಪನೋರ,
   ವಃ 40 ವರ್ಷ,
2. ಅಶೋಕ ತಂದೆ ಮಹಾದೇವಪ್ಪ ಕೋಟೇಪ್ಪನೋರ,
   ವಃ 38 ವರ್ಷ,
3. ನಾರಾಯಣ ತಂದೆ ಲಿಂಗಧಾರ ಕೋಟೇಪ್ಪನೋರ,
   ವಃ 31 ವರ್ಷ,
4. ಸುರೇಶ ತಂದೆ ಹಣಮಂತ ಕೋಟೇಪ್ಪನೋರ,
   ವಃ 33 ವರ್ಷ,
5. ವನೀತಾ ತಂದೆ ತಾಯಪ್ಪ ಕೋಟೇಪ್ಪನೋರ,
   ವಃ 28 ವರ್ಷ,
6. ವೆಂಕಟಮ್ಮ ತಂದೆ ಅಶೋಕ ಕೋಟೇಪ್ಪನೋರ,
   ವಃ 32 ವರ್ಷ,

7. ತಾಯಮ್ಮ ಗಂಡ ನಾರಾಯಣ ಕೋಟೇಪ್ಪನೋರ,
ವಃ 39 ವರ್ಷ,

8. ಮಾಳಮ್ಮ ಗಂಡ ಸುರೇಶ ಕೋಟೇಪ್ಪನೋರ,
ವಃ 27 ವರ್ಷ,

9. ಮಹಾದೇವಮ್ಮ ಗಂಡ ಲಿಂಗಧಾರಿ ಕೋಟೇಪ್ಪನೋರ,
ವಃ 32 ವರ್ಷ,

ಎಲ್ಲರೂ ಸಾಃ ಕರಣಿಗಿ ಗ್ರಾಮ,
ತಾಃ ಗುರುಮಿಠಕಲ್ ಜಿಃ ಯಾದಗಿರಿ.

**ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕ 20.01.2022 ರಂದು ಸಾಃ 06.30 ಗಂಟೆ ಸುಮಾರಿಗೆ ಕರಣಿಗಿ ಗ್ರಾಮದ ಚಾಸಾಃ1, 5, 6 ರವರು ಮನೆಯಲ್ಲಿದ್ದಾಗ ಆರೋಪಿತರಾದ ನೀನು ಚಾಸಾಃ6 ರವರನ್ನು ಉದ್ದೇಶಿಸಿ ಯಾಕೆ ಕೋರ್ಟಿನಲ್ಲಿ ಕೇಸ್ ಹಾಕಿರಿ ಅಂತಾ ಅಕ್ರಮವಾಗಿ ಪ್ರವೇಶ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.448 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 5 ರಿಂದ 9ನೇ ಆರೋಪಿತರಾದ ನೀವು ಚಾಸಾಃ1, 4, 5 ರವರನ್ನು ಕೈಯಿಂದ ಹೊಡೆದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಚಾಸಾಃ6 ರವರು ನನಗೆ ನಮ್ಮ ಜಮೀನುಗಳಲ್ಲಿ ಸರಿಯಾಗಿ ಭಾಗ ಬಂದಿಲ್ಲ ಅದಕ್ಕೆ ನಾನು ಕೇಸ್ ಹಾಕಿದ್ದೇನೆ ಅಂತಾ ಅಂದಾಗ 1 ನೇ ಆರೋಪಿಯಾದ ನೀನು ಮೈಮೇಲೆ ತೂರಿ ಹೋಗಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.354 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಚಾಸಾಃ6 ರವರು ನನಗೆ ನಮ್ಮ ಜಮೀನುಗಳಲ್ಲಿ ಸರಿಯಾಗಿ ಭಾಗ ಬಂದಿಲ್ಲ ಅದಕ್ಕೆ ನಾನು ಕೇಸ್ ಹಾಕಿದ್ದೇನೆ ಅಂತಾ ಅಂದಾಗ 1 ನೇ ಆರೋಪಿಯಾದ ನೀನು ಮೈಮೇಲೆ ತೂರಿ ಹೋಗಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.354 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**5.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 3 ನೇ ಆರೋಪಿಯಾದ ನೀನು ಚಾಸಾಃ4 ರವರ ಕೈಯಲ್ಲಿ ಟ್ರಕ್ಟರ್ ಟ್ರಾಲಿಗೆ ಅಳವಡಿಸುವ ಸನಗುಂಜ ಕಟ್ಟಿಗೆ ತಂದು ತಲೆಗೆ ಹೊಡೆದು ಗಾಯಗೊಳಿಸಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.354 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**6.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 5 ರಿಂದ 9 ನೇ ಆರೋಪಿತರಾದ ನೀನು ಚಾಸಾಃ1,4,5 ರವರಿಗೆ ಬೋಸಡಿ, ರಂಡಿ, ಸೂಳೆ ಮಕ್ಕಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**7.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ 5 ರಿಂದ 9 ನೇ ಆರೋಪಿತರಾದ ನೀನು ಚಾಸಾಃ1,4,5 ರವರಿಗೆ ಜೀವ ಬೆದರಿಕೆ ಹಾಕಿ ಹಲ್ಲೆ ಮಾಡಿದ್ದು, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯುವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 24.10.2025.**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**